

# ತಪ್ಪೆನ್ನದಿರಿ, ಸುಧಾರಣೆಯ ಮಾತನಾಡಿ...

**ಮಕ್ಕಳ ಕೊರತೆಯ ಬಗ್ಗೆ ಹೇಳುವಾಗ ದೊಡ್ಡವರು ಬಳಸುಮಾರ್ಗ ಅನುಸರಿಸಬೇಕು. ಸಕಾರಾತ್ಮಕ ಮಾತುಗಳು ಕೊರತೆ ಸರಿಪಡಿಸಿಕೊಳ್ಳಲು ದಾರಿಯೂ ಆಗಬಹುದು.**

■ ಸ್ವಯಂಪ್ರಭಾ

ಮಗುವಿನ ಕೈ ಹಿಡಿದುಕೊಂಡು ಗೆಳತಿಯೊಂದಿಗೆ ಮಾತನಾಡುತ್ತಿದ್ದಾಳೆ ಅಮ್ಮ. ಎಲ್ಲೋ ದೃಷ್ಟಿ ನೆಟ್ಟು, ಅಮ್ಮನ ಮಾತು ಮುಗಿಯುವುದನ್ನೇ ಕಾಯುತ್ತಿದೆ ಮಗು. ಇನ್ನೂ ಎರಡನೇ ಕ್ಲಾಸಿನ ಮೆಟ್ಟಿಲಿನಲ್ಲಿರುವ ಆ ಪುಟ್ಟಿಗೆ ಅಮ್ಮ ತನ್ನ ಗೆಳತಿಯೊಂದಿಗೆ ಮಾತನಾಡುವ ಎಲ್ಲ ವಿಚಾರಗಳೂ ಅರ್ಥವಾಗುವುದಿಲ್ಲ. ಆದರೆ ಅಮ್ಮನ ಮಾತಿನ ನಡುವೆ ತನ್ನ ವಿಷಯವೂ ಆಗೀಗ ನುಸುಳಿ ಬಂದಾಗ ಮಾತ್ರ ಕಿವಿ ನೆಟ್ಟಗೆ ಮಾಡುತ್ತದೆ.

ಅಮ್ಮನ ಮಾತುಗಳಾದರೂ ಎಂಥವು? ಮುಂದೆ ಬರಲಿರುವ ಮದುವೆಗೆ ಹೋಗಲು ಬೇಕಾದ ಸಿದ್ಧತೆಗಳು, ಸರಿಯಾಗದ ರಸ್ತೆ, ಮೊನ್ನೆ ಓದಿದ ಒಂದು ಪುಸ್ತಕದಲ್ಲಿದ್ದ ವಿಚಾರಗಳು, ಪರಿಚಯದ ಹುಡುಗ ಮಾಡುತ್ತಿರುವ ಯುಟ್ಯೂಬ್ ಚಾನೆಲ್... ಹೀಗೆ ಅಮ್ಮನಿಗೆ ಮಾತನಾಡಲು ಹತ್ತಾರು ವಿಷಯಗಳು. ಆದರೆ ಪ್ರತೀ ಮಾತುಕತೆಯಲ್ಲಿ ಪುಟ್ಟಿಯ ಕಿತಾಪತಿಗಳನ್ನೂ ಅಮ್ಮ ರಮ್ಯವಾಗಿ ವರ್ಣಿಸುತ್ತಾಳೆ. 'ಮೊನ್ನೆ ನೋಡಿದರೆ, ಸಿಂಕ್‌ನಲ್ಲಿರುವ ಪಾತ್ರೆಗಳನ್ನೆಲ್ಲ ತೊಳೆದಿದ್ದಾಳೆ. ನೀರೆಲ್ಲ ಚೆಲ್ಲಿ, ಪಾತ್ರೆ ತೊಳೆಯುವುದಕ್ಕಿಂತ ಹೆಚ್ಚು ಸಮಯ, ಅಲ್ಲಿ ಹರಡಿದ ಪಾತ್ರೆ ಸರಿಪಡಿಸಲು ನನಗೆ ಬೇಕಾಯಿತು' ಎಂದು ಅಮ್ಮ ದೂರುತ್ತಾಳೆ. ಹಾಗೆ ಹೇಳುವಾಗ ಅಮ್ಮನಲ್ಲಿ ಒಂದು ಹೆಮ್ಮೆಯ ಭಾವನೆ ಇರುವುದನ್ನು ಗಮನಿಸುವಷ್ಟು ಪುಟ್ಟಿ ಜಾಣೆ.

ಪುಟ್ಟಿ ಅಂತಲ್ಲ, ಎಲ್ಲ ಮಕ್ಕಳಿಗೂ ದೇವರು ಈ ಶಕ್ತಿಯನ್ನು ಕೊಟ್ಟಿರುತ್ತಾರೆ. ಅದು ದೊಡ್ಡವರ ಮಾತುಗಳನ್ನು ಮೀರಿ, ಅವರ ಇಂಗಿತಾರ್ಥವನ್ನು ಗ್ರಹಿಸುವುದು. ಇದು ಮಕ್ಕಳ ಶಕ್ತಿಯೇ ಹೌದು. ಅವರ ಈ ಸಾಮರ್ಥ್ಯವನ್ನು ಅರ್ಥಮಾಡಿಕೊಂಡ ಪಾಲಕರ ಸಂಖ್ಯೆ ಬಹಳ ಕಡಿಮೆ ಎನ್ನಬೇಕು.

ಅಮ್ಮನ ಮನಸ್ಸಿನಲ್ಲಿದ್ದ ಹೆಮ್ಮೆಯ ಭಾವವನ್ನು ಅರ್ಥಮಾಡಿಕೊಂಡಂತೆಯೇ, ಅಮ್ಮ, ಅಪ್ಪ ಅಥವಾ ಮನೆಯ ಆಪ್ತರು ಮಾತನಾಡುವ ಎಲ್ಲ ಮಾತುಗಳ ನಿಜವಾದ ಅಭಿಪ್ರಾಯ ಏನೆಂಬುದನ್ನು ಅವರು ಗ್ರಹಿಸಬಲ್ಲರು.

ನಿಲೀಮಾಳ ಮಗ ಗಣಿತದಲ್ಲಿ ಕಡಿಮೆ ಅಂಕಗಳನ್ನು ತೆಗೆಯುತ್ತಿದ್ದ. ನಿಲೀಮಾಳಿಗೂ ಇದುವೇ ಚಿಂತೆ. 'ನನ್ನ ಮಗ ಎಲ್ಲ ವಿಷಯಗಳಲ್ಲಿ ಚುರುಕಿದ್ದಾನೆ. ಆದರೆ ಗಣಿತ ಮಾತ್ರ ಅವನಿಗೆ ಬಹಳ ಕಷ್ಟ' ಎಂದು ಆಗಾಗ ಸ್ನೇಹಿತರೊಂದಿಗೆ, ಶಾಲೆಯಲ್ಲಿ ಟೀಚರ್ಸ್ ಜೊತೆ ಹೇಳುತ್ತಿದ್ದಳು. ಅಮ್ಮನ ಈ ಮಾತುಗಳನ್ನು ಕೇಳಿ ಕೇಳಿ, ಮಗ ಸುಮೀತ್ ಕೂಡ ಆ ಮಾತನ್ನು ಒಪ್ಪಿಕೊಂಡಿದ್ದ. 'ನನಗೆ ಗಣಿತ ಕಷ್ಟ' ಎನ್ನುವುದು ಅವನ ಮನಸ್ಸಿನಲ್ಲಿ ಅಚ್ಚಾಗಿತ್ತು.

ಒಮ್ಮೆ ಪೇರೆಂಟ್ ಟೀಚರ್ಸ್ ಮೀಟಿಂಗ್‌ನಲ್ಲಿ ಕೌನ್ಸಿಲಿಂಗ್ ಟೀಚರ್ ಭೇಟಿಯಾದರು. ನಿಲೀಮಾ ಅದೇ ಕತೆ ಹೇಳಿದರು. 'ನನ್ನ ಮಗನಿಗೆ ಗಣಿತ ಬಾಳ ಕಷ್ಟ'. ಕೌನ್ಸಿಲಿಂಗ್ ಟೀಚರ್‌ಗೆ ನಿಜವಾದ ಸಮಸ್ಯೆ ಏನೆಂದು ಅರ್ಥವಾಯಿತು. ಅವರು ನಿಲೀಮಾಳನ್ನು ಪ್ರತ್ಯೇಕವಾಗಿ ಕರೆದು, ಇನ್ನೆಂದೂ ಅಂತಹ ಮಾತುಗಳನ್ನು ಹೇಳದಂತೆ ತಿಳಿ ಹೇಳಿದರು. ಸುಮೀತ್‌ನನ್ನು ಪ್ರತ್ಯೇಕವಾಗಿ ಕರೆದು ಕೆಲವು ಚಟುವಟಿಕೆಗಳನ್ನು ನೀಡಿದರು. ಆ ಚಟುವಟಿಕೆಗಳು ಅವನಲ್ಲಿ ನಿಧಾನವಾಗಿ ಗಣಿತದ ಬಗೆಗಿನ ಅಭಿಪ್ರಾಯವನ್ನು ಬದಲಾಯಿಸಿದವು.

ಎಷ್ಟೋ ಸಂದರ್ಭಗಳಲ್ಲಿ ಮನೆಗೆ ಬಂದ ಅತಿಥಿಗಳ ಬಳಿ, ಅಥವಾ ಸ್ನೇಹಿತರ ಬಳಿ ದೊಡ್ಡವರು ಮಕ್ಕಳ ಬಗ್ಗೆ ಹೇಳುವ ಅಭಿಪ್ರಾಯಗಳನ್ನು ಮಕ್ಕಳು ಆಲಿಸುತ್ತಾರೆ. ಗಣಿತ ನನಗೆ ಕಷ್ಟ ಎಂದು ಅಮ್ಮನೇ ನಂಬಿರುವಾಗ, ಇನ್ನು ನಾನೇಕೆ ಅದರ ಗೊಡವೆಗೆ ಹೋಗಲಿ ಎಂಬ ಸುಪ್ತ ಯೋಚನೆಯೊಂದು ಮಗುವಿನ ಮನಸ್ಸಿನಲ್ಲಿ ಮೂಡುತ್ತದೆ. ಆದರೆ ಇದೇ ತಂತ್ರವನ್ನು ಹಿರಿಯರು ಸಕಾರಾತ್ಮಕವಾಗಿಯೂ ಬಳಸಿಕೊಳ್ಳಬಹುದು. 'ಸುಮೀತ್‌ಗೆ ಗಣಿತ ಸ್ವಲ್ಪ ಕಷ್ಟ ಆಗಿತ್ತು. ಆದರೆ ಅವನು ಕಷ್ಟದ ವಿಷಯಕ್ಕೆ ಹೆಚ್ಚು ಸಮಯ ಕೊಟ್ಟು ಓದುತ್ತಾನೆ. ಹಾಗಾಗಿ ಈಗೀಗ ಸುಧಾರಿಸುತ್ತಿದ್ದಾನೆ' ಎಂಬ ಮಾತುಗಳು ಅವನ ಕಿವಿಗೆ ಬೀಳುತ್ತಲೇ, ಕಲಿಕೆಯ ಚಿಗುರೊಂದು ಅವನ ಮನಸ್ಸಿನಲ್ಲಿ ಮೂಡುವುದು ಖಂಡಿತ.

'ಹಿಚ್ಕೀ' ಎಂಬ ಹಿಂದಿ ಸಿನಿಮಾದಲ್ಲಿ ಶಿಕ್ಷಕಿ ನೈನಾ ಮಾಥುರ್ ಪಾತ್ರವನ್ನು ರಾಣಿ ಮುಖರ್ಜಿ ನಿರ್ವಹಿಸಿದ್ದಾರೆ. ಅವರಿಗೆ '9ನೇ ಎಫ್' ತರಗತಿಯನ್ನು ನಿರ್ವಹಿಸಲು ಸೂಚಿಸುತ್ತಾರೆ. ಬರೀ ಪೋಕರಿಗಳ ಬ್ಯಾಚ್ ಎಂದೇ ಕುಖ್ಯಾತಿ ಪಡೆದಿದ್ದ ಆ ತರಗತಿಯ ಮಕ್ಕಳು ಬಡತನದ ಹಿನ್ನೆಲೆಯವರು. 'ನಾವೆಲ್ಲರೂ ಪೋಕರಿಗಳು, ಅದಕ್ಕೆ ತಕ್ಕಂತಹ ಕೆಲಸಗಳನ್ನೇ ಮಾಡಬೇಕು' ಎಂದು ಅವರೆಲ್ಲರೂ ಅಂದುಕೊಂಡಿದ್ದರು. ಆದರೆ ನೈನಾ ಮಾಥುರ್ ಟೀಚರ್, ಮೊದಲು ಆ ಮಕ್ಕಳ ಮನಸ್ಸನ್ನು ಪರಿವರ್ತಿಸುತ್ತಾರೆ. 'ನೀವು ಮಾಡುವ ಪೋಕರಿ ಕೆಲಸಗಳಲ್ಲೇ ಗಣಿತ, ವಿಜ್ಞಾನ, ಸಮಾಜ ಪಾಠಗಳು ಹೇಗೆ ಅಡಗಿವೆ ನೋಡಿ' ಎಂದು ಹೇಳಿಕೊಡುತ್ತಾರೆ.

ಮಕ್ಕಳು ಗಣಿತ, ವಿಜ್ಞಾನ ಅಥವಾ ಕಲೆ, ಸಾಹಿತ್ಯವನ್ನು ಕಲಿಯಬೇಕು ಎಂಬುದಕ್ಕಿಂತಲೂ, ಅವರೆಲ್ಲ ಈ ವಿಚಾರಗಳನ್ನು ಹೇಗೆ ಕಲಿಯಬೇಕು ಎಂಬುದೇ ಬಹಳ ಮುಖ್ಯ.

ಪ್ರತಿಕ್ರಿಯಿಸಿ: feedback@sudha.co.in